**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ</u>**

**<u>ಸಿ.ಸಿ. ನಂ. 660/2020</u>**

**<u>ಸಿ.ಡಬ್ಲ್ಯೂ: 7 ಪಿ.ಡಬ್ಲ್ಯೂ: 3</u>**

ಸಾಕ್ಷಿದಾರನ ಹೆಸರು : ಮೌನೇಶ
ತಂದೆಯ ಹೆಸರು : ಪುಲ್ ಚೆಂದ
ವಯಸ್ಸು : 37 ವರ್ಷ
ಕೆಲಸ : ಅಬಕಾರಿ ನಿರೀಕ್ಷಕರು
ವಾಸ : ಚಿಕ್ಕಮಗಳೂರು

**<u>ಸಾಕ್ಷಿಗೆ ದಿನಾಂಕಃ28.10.2025 ರಂದು ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ</u>**

1. ನಾನು ದಿಃ 29.06.2019 ರಿಂದ 27.12.2023 ರವರೆಗೂ ನಾನು ಸಿರುಗುಪ್ಪ ದಲ್ಲಿ ಅಬಕಾರಿ ಉಪನೀರಿಕ್ಷಕನಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಪ್ರಕರಣದ ಮುಂದಿನ ತನಿಖೆಯನ್ನು ವಹಿಸಿಕೊಂಡು ಚಾಸಾ 2, 3 ಮತ್ತು 5 ರವರ ಹೇಳಿಕೆ ಪಡೆದೆನು. ದಿಃ 28.05.2020 ರಂದು ಜಪ್ತ ಮು. ಮಾ ವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟೆನು. ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಢಿಕೊಂಡೆನು. ಸದರಿ ವರದಿಯನ್ನು ನಿಪಿಃ 5 ಮತ್ತು ಸಾಕ್ಷಿ ಸಹಿಯನ್ನು ನಿಪಿಃ 5(ಎ) ಎಂದು ಗುರುತಿಸಲಾಯಿತು. ಚಾಸಾ 5 ರವರ ಮರು ಹೇಳಿಕೆ ಪಡೆದೆನು. ನಗರಸಭೇ ಸಿರುಗುಪ್ಪ ಕಚೇರಿಗೆ ಆರೋಪಿಯ ಸ್ವತ್ತಿನ ಮಾಲೀಕತ್ವದ ವಿವರ ಕೋರಿ ಪತ್ರ ಬರೆದು ನಮೂನೆ 3 ದಾಖಲೆಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆನು. ಪತ್ರವನ್ನು ನಿಪಿಃ 6 ಮತ್ತು ಸಾಕ್ಷಿ ಸಹಿಯನ್ನು ನಿಪಿಃ 6(ಎ) ಎಂದು ಮತ್ತು ನಮೂನೆ 3 ದಾಖಲೆಯನ್ನು ನಿಪಿಃ 7 ಎಂದು ಗುರುತಿಸಲಾಯಿತು. ಚಾಸಾ 6 ರವರ ಹೇಳಿಕೆ ಪಡೆದೆನು. ದಿಃ 08.06.2020 ರಂದು ಉಳಿದ ಮು

ಮಾ ನ್ನು ಸಕ್ಷಮ ಪ್ರಾಧಿಕಾರಕ್ಕೆ ಹಸ್ತಾಂತರ ಮಾಡಿದೆನು. ನಂತರ ಕಡತವನ್ನು ಚಾಸಾ 1 ರವರಿಗೆ ಹಸ್ತಾಂತರ ಮಾಡಿದೆನು.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

3. ಘಟನಾ ಸ್ಥಳ ಆರೋಪಿಗೆ ಸಂಬಂದಪಟ್ಟ ಮನೆ ಅಲ್ಲ ಎಂದರೆ ಸರಿಯಲ್ಲ. ಚಾಸಾ 1 ನನ್ನ ಮೇಲಾಧಿಕಾರಿ ಎಂದರೆ ಸರಿ. ನಾನು ಯಾವುದೇ ಸಾಕ್ಷಿಯ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳದ ಹೇಳಿಕೆ ಪಡೆದಿಲ್ಲ ಎಂದರೆ ಸರಿ. ಠಾಣಾ ಅಂಕೆ ಸಂಖ್ಯೆಗೋಸ್ಕರ ಚಾಸಾ 1 ರವರು ಸುಳ್ಳು ದೂರು ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ಮು.ಮಾ ಗೂ ಆರೋಪಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ.**